ಉಪ ನಿರ್ದೇಶಕರ ಕಛೇರಿ
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ.
ಬೆಂಗಳೂರು - 2.

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ, ಉಪನಿರ್ದೇಶಕರ ಕಛೇರಿ,**
**ಕೆಂಪೇಗೌಡ ರಸ್ತೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು-02.**

ಸಂಖ್ಯೆ: ಅನು2 ಪ್ರಾಶಿಅ/ಹೊ.ಶಾ.ಅ.ನೋಂ 54/2014-15 ದಿನಾಂಕ: 15-09-2016

13y Reg post

ನಮೂನೆ-2
(ನಿಯಮ 3 ಉಪನಿಯಮ 5 (ಬಿ)
**ಪ್ರಮಾಣ ಪತ್ರ ಸಂಖ್ಯೆ: 98/2016-17**

ಶಿವಗಂಗಾ ಎಜುಕೇಷನ್ ಟ್ರಸ್ಟ್(ರಿ), ನಂ. 10/1, ಬ್ಯಾಡರಹಳ್ಳಿ, ಮಾಗಡಿ ಮುಖ್ಯ ರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು-91 ಇವರಿಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆ್ಯಕ್ಟ್ 1995) ಸೆಕ್ಷನ್ 31 ರಂತೆ ಗೂ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಡಿ 44 ಪಿ.ಜಿ.ಸಿ. 2002 ದಿನಾಂಕ: 11-06-2002ರ ಪ್ರಕಾರ ಮತ್ತು ಸರ್ಕಾರದ ಅಧಿಸೂಚನೆ ಪತ್ರ ಸಂಖ್ಯೆ: ಇಡಿ 617 ಪಿಜಿಸಿ 2015 ದಿನಾಂಕ: 23-12-2015 ರನ್ವಯ ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ(ಹಿರಿಯ ಪ್ರಾಥಮಿಕ ಶಾಲೆಗಳ) ನೋಂದಣಿ ವಹಿಯ **ಸಂಪುಟ ಸಂಖ್ಯೆ: 01, ಪುಟ ಸಂಖ್ಯೆ: 33 ರಲ್ಲಿ ಕ್ರಮ ಸಂಖ್ಯೆ: 98** ರಂತೆ ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1 | ಕ್ರಮ ಸಂಖ್ಯೆ | 98/2016-17 |
| 2 | ಶಾಲೆಯ ಹೆಸರು ಮತ್ತು ವಿಳಾಸ | ಬ್ಲೂಬೆಲ್ ಕಾನ್ವೆಂಟ್ ಪ್ರಾಥಮಿಕ ಶಾಲೆ,<br>ಸರ್ವೆ ನಂ. 10/1, ಹೊಸಹಳ್ಳಿ ಗೊಲ್ಲರಪಾಳ್ಯ,<br>ಕೆಂಪೇಗೌಡ ರಸ್ತೆ, ಮಾಗಡಿ ಮುಖ್ಯ ರಸ್ತೆ,<br>ಬೆಂಗಳೂರು-91 |
| 3 | ಅನುಮತಿ ನೀಡಿದ ತರಗತಿಗಳು | 6ನೇ ತರಗತಿ, 7ನೇ ತರಗತಿ, 8ನೇ ತರಗತಿ<br>[ಶಾಶ್ವತ ಅನುದಾನ ರಹಿತವಾಗಿ] |
| 4 | ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ | 6ನೇ ತರಗತಿ 2016-17 – 1 ವಿಭಾಗ<br>7ನೇ ತರಗತಿ 2017-18 – 1 ವಿಭಾಗ<br>8ನೇ ತರಗತಿ 2018-19 – 1 ವಿಭಾಗ<br>**ಒಟ್ಟು – 3 ವಿಭಾಗಗಳು** |
| 5 | ಅನುಮತಿ ನೀಡಿದ ಮಾಧ್ಯಮ | ಆಂಗ್ಲ ಮಾಧ್ಯಮ |
| 6 | ಶುಲ್ಕ ಪಾವತಿ ವಿವರ | 1. ನೋಂದಣಿ ಶುಲ್ಕ ರೂ 1,00,000-00<br>2. ಸಂಸ್ಕರಣಾ ಶುಲ್ಕ ರೂ 20,000-00 |

ಈ ನೋಂದಣಿ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ. ಇದರಲ್ಲಿ ಯಾವುದೇ ಷರತ್ತನ್ನು ಉಲ್ಲಘಿಂಸಿದಲ್ಲಿ ಮೇಲ್ಕಂಡ (ನೋಂದಣಿ) ಅನುಮತಿಯನ್ನು ರದ್ದುಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

1. ಈ ನೋಂದಣಿಯು ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಖಾಸಗಿ ಶಿಕ್ಷಣ ಸಂಸ್ಥೆಗಳು ನಿಯಂತ್ರಣ, ವರ್ಗೀಕರಣ] ನಿಯಮ-1997 ನಿಯಮ-3[5][ಡಿ] ನಲ್ಲಿ ಸೂಚಿಸಿರುವ ಅಂಶಗಳಿಗೆ ಒಳಪಟ್ಟಿರುತ್ತದೆ.
2. ಕರ್ನಾಟಕ ಶಿಕ್ಷಣ ಸಂಸ್ಥೆಗಳು [ವರ್ಗೀಕರಣ, ನಿಯಂತ್ರಣ, ಮತ್ತು ಪಠ್ಯವಸ್ತು ನಿಗಧೀಕರಣ ಇತ್ಯಾದಿ] ನಿಯಮಾವಳಿಗಳು 1995ರ ನಿಯಮ 4, 5, 6 ಮತ್ತು 8 ರನ್ವಯ ಸುರಕ್ಷತಾ ಕ್ರಮವಾಗಿ ಶಾಲಾ ಕಟ್ಟಡವು ಕಡ್ಡಾಯವಾಗಿ ಉತ್ತಮ ಗುಣಮಟ್ಟದ ಮೇಲ್ಛಾವಣಿಯನ್ನು ಹೊಂದಿದ್ದು, ಉತ್ತಮ ಗಾಳಿ ಬೆಳಕಿಗೆ ಅವಕಾಶವಿರಬೇಕು. ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳನ್ನು ಒದಗಿಸಬೇಕು. ಕುಡಿಯುವ ನೀರನ್ನು ಒದಗಿಸಿರಬೇಕು, ಶಾಲಾ ಆವರಣದಲ್ಲಿರುವ ಅಪಾಯಕಾರಿ ಸ್ಥಳಗಳಿಗೆ ಬೇಲಿ ಹಾಕಿ, ಶಾಲಾ ಆವರಣಕ್ಕೆ ಮಕ್ಕಳ ಸುರಕ್ಷತೆಗಾಗಿ ಕಾಂಪೌಂಡನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು, ಬೆಂಕಿ ಆಕಸ್ಮಿಕಗಳನ್ನು ತಪ್ಪಿಸಲು ಅಗತ್ಯ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕು.
3. ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.

--2

[signature] 9/16

ಉಪ ನಿರ್ದೇಶಕರ ಕಛೇರಿ
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ.



4. ಕರ್ನಾಟಕ ಶಿಕ್ಷಣ ಕಾಯ್ದೆ ಸೆಕ್ಷನ್-4[5] ರಂತೆ ಶಾಲೆಯನ್ನು ಮಂಜೂರು ಮಾಡಿದ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
5. ಯಾವ ಶಿಕ್ಷಣ ಸಂಸ್ಥೆಗೆ ಶಾಲೆ ನಡೆಸಲು ಅನುಮತಿ ನಿಡಲಾಗಿದೆಯೋ ಅದೇ ಶಿಕ್ಷಣ ಸಂಸ್ಥೆಯು ಅದೇ ಸ್ಥಳದಲ್ಲಿ ಮತ್ತು ಅದೇ ಹೆಸರಿನಲ್ಲಿ ಶಾಲೆ ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಸ್ಥಳಾಂತರಿಸತಕ್ಕದ್ದಲ್ಲ ಮತ್ತು ಹಸ್ತಾಂತರಿಸಕ್ಕದ್ದಲ್ಲ.
6. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸಿದ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 [ಕರ್ನಾಟಕ ಆ್ಯಕ್ಟ್ ಸಂಖ್ಯೆ: 1:95] ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.
7. ಈ ಪ್ರಾಥಮಿಕ ಶಾಲಾ ನೋಂದಣಿಯು ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 175 ಪಿ.ಎಂ.ಸಿ. 95 ದಿನಾಂಕ: 07-07-1998 ಮತ್ತು 29-12-1998ರ ಪ್ರಕಾರ ಶಾಶ್ವತ ಅನುದಾನರಹಿತ ವಾಗಿರುತ್ತದೆ.[Permanently without-aid]
8. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ [ಶಿಸ್ತು ಮತ್ತು ನಿಯಂತ್ರಣ] ನಿಯಮಗಳು 1999ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು / ಅವುಗಳಿಗೆ ಬದ್ದವಾಗಿರತಕ್ಕದ್ದು.
9. ಕರ್ನಾಟಕ ಶಿಕ್ಷಣ ಸಂಸ್ಥೆಗಳು [ವರ್ಗೀಕರಣ, ನಿಯಂತ್ರಣ, ಮತ್ತು ಪಠ್ಯವಸ್ತು ನಿಗಧೀಕರಣ ಇತ್ಯಾದಿ] ನಿಯಮಾವಳಿಗಳು 1995ರನ್ವಯ ಇಲಾಖೆ ಮತ್ತು ಸರ್ಕಾರ ನಿಗಧಿಪಡಿಸಿದ ಪಠ್ಯಪುಸ್ತಕಗಳನ್ನು ಮಾತ್ರ ಬೋಧಿಸತಕ್ಕದ್ದು ಹಾಗೂ ವಿಧ್ಯಾರ್ಥಿಗಳಿಗೆ ಪಠ್ಯಪುಸ್ತಕ ಹೊರೆಯಾಗದಂತೆ ಕ್ರಮವಹಿಸುವುದು.
10. ಕರ್ನಾಟಕ ಶಿಕ್ಷಣ ಸಂಸ್ಥೆಗಳು [ವರ್ಗೀಕರಣ, ನಿಯಂತ್ರಣ, ಮತ್ತು ಪಠ್ಯವಸ್ತು ನಿಗಧೀಕರಣ ಇತ್ಯಾದಿ] ನಿಯಮಾವಳಿಗಳು 1995 ದಿನಾಂಕ: 04-10-1996ರ ನಿಯಮ-10 ರಂತೆ ಟರ್ಮ್ ಶುಲ್ಕ,ಬೋಧನಾ ಶುಲ್ಕ, ವಿಶೇಷ ಅಭಿವೃದ್ಧಿ ಶುಲ್ಕಗಳನ್ನು ಮಾತ್ರ ವಸೂಲಿ ಮಾಡತಕ್ಕದ್ದು ಹಾಗೂ ನಿಯಮ 10(04)ರಂತೆ ಶಾಲೆಯಲ್ಲಿ ವಿದ್ಯಾರ್ಥಿ/ಪೋಷಕರಿಂದ ವಸೂಲಿ ಮಾಡುವ ಶುಲ್ಕಗಳ ವಿವರಗಳ ಒಂದು ಬ್ರೋಚರ್‌ಅನ್ನು ಶಾಲೆಯ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಿ, ಅದರ ಒಂದು ಪ್ರತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮತ್ತು ಉಪನಿರ್ದೇಶಕರಿಗೆ ಸಲ್ಲಿಸತಕ್ಕದ್ದು. ಈ ಬಗ್ಗೆ ಕಾಲದಿಂದ ಕಾಲಕ್ಕೆ ಹೊರಡಿಸುವ ಇಲಾಖೆಯ ಸುತ್ತೋಲೆಯಲ್ಲಿನ ಅಂಶಗಳನ್ನು ಪಾಲಿಸತಕ್ಕದ್ದು.
11. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 39 ವಿವಿಧ-99 ದಿನಾಂಕ: 14-03-2000ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ರೆಗ್ಯುಲೇಷನ್ ಆಫ್ ಸರ್ಟನ್ ಫೀಸ್ ಅಂಡ್ ಡೊನೇಶನ್ಸ್) ನಿಯಮ-1999ರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ಈ ನಿಯಮದಂತೆ ಯಾವುದೇ ವಂತಿಗೆಯನ್ನು ವಸೂಲು ಮಾಡುವಂತಿಲ್ಲ. ಈ ಬಗ್ಗೆ ಕಾಲದಿಂದ ಕಾಲಕ್ಕೆ ಹೊರಡಿಸುವ ಇಲಾಖೆಯ ಸುತ್ತೋಲೆಯಲ್ಲಿನ ಅಂಶಗಳನ್ನು ಪಾಲಿಸತಕ್ಕದ್ದು.
12. ಅನುಮತಿ ಪಡೆದ 2 ತಿಂಗಳೊಳಗಾಗಿ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಆಕ್ಟ್ 1 ಆಫ್ 1995) ಪ್ರಕಾರ ಸೆಕ್ಷನ್ 36 ರಿಂದ 39 ರ ರೀತ್ಯಾ ಹಾಗೂ ಇಡಿ 131 ವಿವಿಧ 98 ದಿನಾಂಕ: 04-11-1999 ರಂತೆ ಮಾನ್ಯತೆ ಹೊಂದಲು ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 137 ವಿವಿಧ 98 ದಿನಾಂಕ: 19-05-1999ರ ಪ್ರಕಾರ ಸಕ್ಷಮ ಪ್ರಾಧಿಕಾರಿಗಳಿಗೆ ಅರ್ಜಿ ಸಲ್ಲಿಸತಕ್ಕದ್ದು. ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 369 ಪಿಜಿಸಿ 2014 ದಿನಾಂಕ: 11-11-2014 ಹಾಗೂ ಸಂಬಂಧಿತ ತಿದ್ದುಪಡಿ ಆದೇಶದಲ್ಲಿ ಸೂಚಿಸಿರುವಂತೆ ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ನಿಗಧಿತ ಭದ್ರತಾ ಠೇವಣಿಯನ್ನು ಮಾನ್ಯತೆ ನವೀಕರಿಸುವ ಪ್ರಾಧಿಕಾರ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.
13. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 52 ವಿವಿಧ 99 ದಿನಾಂಕ: 02-02-2000ರ ಅನೆಕ್ಸರ್-5ರ ನಿಯಮದಂತೆ ಅನುಮತಿ ಪಡೆದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ಪಾಲಿಸತಕ್ಕದ್ದು.
14. 6 ರಿಂದ 8ನೇ ತರಗತಿಗೆ ಬಿ.ಇಡಿ ತರಬೇತಿ ಹೊಂದಿದ ಶಿಕ್ಷಕರನ್ನು ನೇಮಿಸಿಕೊಳ್ಳತಕ್ಕದ್ದು.
15. ಕರ್ನಾಟಕ ಶಿಕ್ಷಣ ಮಸೂದೆಯ ನಿಯಮಗಳಂತೆ ಶಾಲೆಗೆ ಒದಗಿಸಬೇಕಾದ ಮೂಲಭೂತ ಸೌಕರ್ಯಗಳಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ, ಆಟದ ಮೈದಾನ ಮತ್ತು ಶಾಲಾ ಕಟ್ಟಡವನ್ನು ಒದಗಿಸಿಕೊಂಡಿರತಕ್ಕದ್ದು.

- - 3

15/9/16

ಉಪ ನಿರ್ದೇಶಕರ ಕಛೇರಿ
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ.
ಬೆಂಗಳೂರು - 2.



16. ಶಾಲಾ ಕೆಲಸದ ಅವಧಿ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.
17. ಶಾಲೆಯನ್ನು ಪ್ರಾರಂಭಿಸಿ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳ ಒಳಗಾಗಿ ಈ ಕಛೇರಿಗೆ ವರದಿ ಸಲ್ಲಿಸುವುದು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತನ್ನಿಂದ ತಾನೇ ರದ್ದಾಗುವುದು.
18. ಈಗಾಗಲೇ ಶಾಲೆಯಲ್ಲಿ 1 ರಿಂದ 7ನೇ ತರಗತಿ ಕನ್ನಡ ಮಾಧ್ಯಮ ಇದ್ದಲ್ಲಿ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ಮಂಜೂರಾತಿಯಿಂದ ಕನ್ನಡ ಮಾಧ್ಯಮದ ತರಗತಿಗಳಿಗೆ ಯಾವುದೇ ರೀತಿ ಧಕ್ಕೆ ಬಾರದಂತೆ ನೋಡಿಕೊಳ್ಳುವುದು.
19. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 27 ಎಸ್ಇಪಿ 03 ದಿನಾಂಕ: 13-02-2003ರ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ ಶಾಲೆಯಲ್ಲಿ ನೇಮಕಗೊಂಡಿರುವ ಶಿಕ್ಷಕರ/ಸಿಬ್ಬಂದಿ ಸೇವಾ ವಿವರಗಳನ್ನು ನಿಯಮಾನುಸಾರ ದಾಖಲು ಮಾಡಿ ಕಡ್ಡಾಯವಾಗಿ ನಿರ್ವಹಿಸುವುದು.
20. ಶಿಕ್ಷಕರನ್ನು ಗಣತಿ ಕಾರ್ಯಕ್ಕೆ ತಪ್ಪದೇ ನಿಯೋಜಿಸುವುದು.
21. ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ದಾಖಲೆಗಳು ಸುಳ್ಳು ದಾಖಲೆಗಳೆಂದು ಕಂಡು ಬಂದಲ್ಲಿ ಈ ನೋಂದಣಿಯನ್ನು ರದ್ದು ಪಡಿಸಲಾಗುವುದು.
22. ಪ್ರತಿ ತರಗತಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ: 50ಕ್ಕೆ ಮೀರಬಾರದು.
23. ಅನುಮತಿ ನೀಡಿದ 5 ವರ್ಷಗಳವರೆಗೆ ಶಾಲಾ ಸ್ಥಳಾಂತರ ಮತ್ತು ಹಸ್ತಾಂತರಕ್ಕೆ ಅವಕಾಶವಿರುವುದಿಲ್ಲ.
24. ಸರ್ಕಾರದ ಪತ್ರ ಸಂಖ್ಯೆ: ಇಡಿ 122 ಎಸ್ಇಎಸ್ 2007 ದಿನಾಂಕ: 17-05-2007ರ ಪತ್ರದಲ್ಲಿನ ಷರತ್ತುಗಳನ್ನು ಪೂರೈಸತಕ್ಕದ್ದು.
25. ಯಾವ ಮಾಧ್ಯಮದಲ್ಲಿ ನೋಂದಣಿ ನೀಡಲಾಗಿದೆಯೋ ಅದೇ ಮಾಧ್ಯಮದಲ್ಲಿ ಮಾತ್ರ ಶಾಲೆಯನ್ನು ನಡೆಸತಕ್ಕದ್ದು.
26. ಶಾಲೆಯಲ್ಲಿ ವಿದ್ಯಾರ್ಥಿಗಳ ಸುರಕ್ಷತೆಯ ಬಗ್ಗೆ ಶಿಕ್ಷಣ ಇಲಾಖೆ, ಮತ್ತು ಗೃಹ ಇಲಾಖೆಗಳು ಹೊರಡಿಸಿರುವ ಮಾರ್ಗಸೂಚಿಯನ್ವಯ ಎಲ್ಲಾ ಭದ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಅಗತ್ಯ ಎಲ್ಲಾ ಭದ್ರತಾ ಉಪಕರಣಗಳನ್ನು ಕಡ್ಡಾಯವಾಗಿ ಅಳವಡಿಸಿರಬೇಕು ಮತ್ತು ಸುಸ್ಥಿತಿಯಲ್ಲಿಡಬೇಕು.
27. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 369 ಪಿಜಿಸಿ 2014 ದಿನಾಂಕ: 11-11-2014 ಹಾಗೂ ಸಂಬಂಧಿತ ತಿದ್ದುಪಡಿ ಆದೇಶದಲ್ಲಿ ಸೂಚಿಸಿರುವಂತೆ ಶಾಲೆಯ ಮೂಲಭೂತ ಸೌಲಭ್ಯ ಹಾಗೂ ಇತರೆ ಷರತ್ತುಗಳನ್ನು ಕಡ್ಡಾಯವಾಗಿ ಪೂರೈಸತಕ್ಕದ್ದು ಹಾಗೂ ಈ ಕುರಿತು ಪ್ರಥಮ ಮಾನ್ಯತೆ ನೀಡುವ ಸಂದರ್ಭದಲ್ಲಿ ಪರಿಶೀಲಿಸಿ ಮಾನ್ಯತೆ ನೀಡಲಾಗುವುದು.
28. ವ್ಯಾಪ್ತಿಯಲ್ಲಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಯು ನೋಂದಣಿ ನಿಯಮಗಳಂತೆ ನಡೆಯುತ್ತಿರುವ ಬಗ್ಗೆ ಸೂಕ್ತ ನಿಗಾವಹಿಸತಕ್ಕದ್ದು.
29. ನೋಂದಣಿಯ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿರುವುದು ಕಂಡು ಬಂದಲ್ಲಿ ಏಕಪಕ್ಷೀಯವಾಗಿ ನೋಂದಣಿಯನ್ನು ಹಿಂಪಡೆಯುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

ದಿನಾಂಕ: 15-09-2016
ಸ್ಥಳ: ಬೆಂಗಳೂರು

(ಅಬ್ದುಲ್ ವಾಜೀದ್ ಖಾಜಿ)
ಉಪನಿರ್ದೇಶಕರು(ಆಡಳಿತ)
ನೋಂದಣಿ ಪ್ರಾಧಿಕಾರಿಗಳು
ಬೆಂಗಳೂರು ಉತ್ತರ ಜಿಲ್ಲೆ.

ಉಪ ನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ.
15/9/16

**ಇವರಿಗೆ:** ಕಾರ್ಯದರ್ಶಿಗಳು, ಶಿವಗಂಗಾ ಎಜುಕೇಷನ್ ಟ್ರಸ್ಟ್(ರಿ), ನಂ. 10/1, ಬ್ಯಾಡರಹಳ್ಳಿ, ಮಾಗಡಿ ಮುಖ್ಯ ರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು-91 **(ನೋಂದಣಿ ಅಂಚೆ ಮೂಲಕ)**

**ಪ್ರತಿಯನ್ನು:**
1. ಮಾನ್ಯ ನಿರ್ದೇಶಕರು(ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉತ್ತರ ವಲಯ-1, 2ನೇ ಬ್ಲಾಕ್ ರಾಜಾಜಿನಗರ, ಬೆಂಗಳೂರು-10.
3. ಕಛೇರಿ

OFFICE OF THE DEPUTY DIRECTOR, PUBLIC INSTRUCTION
DEPARTMENT OF THE GOVERNMENT OF KARNATAKA

No. Anu2Prashia/Ho.Sha.a.No./54/2014-15.

Dated:15-09-2016.

FORM-2

(Sub Rule 5(b) of Rule 3)
CERTIFICATE NO. 98/2016-17.

It is certified that the following educational institution run by Shivaganga educational Trust (R), No.10/1, Byadarahally, Magadi Main road, Vishwaneedam post,Bangalore-91 has registered as per section 31 of Karnataka Education Act of 1983 (Karnataka act 1995), and as per the Order No.ED 44 P.G.C. 2002 dated 11-06-2002 of the Government of Karnataka and as per Notification No. ED 618 PGC 2015 dated: 23-12-2015 of the Government in Volume No. 1, Page No.33, Sl.No. 989 of the Registration Register of Academic institutions (Higher Primary Schools) of this office.

NOTARY
H.R. KARUNAKARA
Area, Bengaluru Dist.
Reg. No. 12327
Expiry Date
30-12-2026
GOVT. OF INDIA

| | | |
|---|---|---|
| 1 | Serial Number | 98/2016-17 |
| 2 | Name and address of the school | Bluebell Convent Primary School, Sy.No.10/1, Hosahally, Gollarapalya, Kempegowda nagar, Magadi Main road,Bangalore-91 |
| 3 | Standards given permission | 6th standard, 7th standard, 8th standard (with permanently unaided) |
| 4 | Academic year to be commenced. | 6th standard-2016-17 –1 section<br>7th standard 2017-18 – Section 1<br>8th standard – 2018-19 – 1 section. |
| 5 | Medium given permission | English medium |
| 6 | Particulars of fee paid | 1. Registration fee Rs.1,00,000-00<br>2. Processing fee Rs. 20000-00 |

This Registration Certificate has been issued subject to the following conditions. Out of this if any condition is violated, the Department reserved the right to cancel the above (Registration) permission.

NOTARY
H.R. KARUNAKARA
Area, Bengaluru Dist.
Reg. No. 12327
Expiry Date
30-12-2026
GOVT. OF INDIA

1. This registration is subject to the points noted under Rule-3(5) (d) of Karnataka Educational Institutions (Private Educational institutions Control, classification) Rule -1997).
2. As per Rule 4, 5, 6 and 8 of Karnataka Educational Institutions (Classification Control, and prescription of text book etc.,) Rules of -1997, the building should have good quality roof there should be provision for good air and ventilation.
3. The Educational society shall not open any additional sections without the prior permission of the Government at any circumstances.
4. As per Karnataka Education Act, 4(5) the school shall opened in the in the sanctioned medium and in the same place. And for any reason there is no opportunity for change of place.
5. For which educational institution the permission is given to run the school, the same educational institution in the same place and in the same name shall run the school. And for any reason shall not shift and transfer without the prior permission of the Government.
6. This educational institution shall follow all the Government orders issued from time to time and in force. Shall follow the Acts coming under

NOTARY
H.R. KARUNAKARA
Area, Bengaluru Dist.
Reg. No. 12327
Expiry Date
30-12-2026
GOVT. OF INDIA

Karnataka Education Act 1983 (Shall follow Karnataka Education act 1983 (Karnataka Act No.1/95) and the rules framed under it.

7. The registration of this Primary School is Permanently without-aid as per the Government Notification No. ED 175 P.M.C. 95 dated 07-07-1998 and 29-12-1998.
8. Shall follow Karnataka Private Educational Institutions (Discipline and Control) Rules, of 1999 without fail /and shall be binding to them.
9. As per Karnataka Educational Institutions (Classification, Control and Prescription of syllabus etc.) Rules of 1995 and to take action not to burden the text books to the students.
10. As per Rule 10 of Karnataka Educational Institutions (Classification Control and fixation of syllabus etc.)Rules 1995 dated 04-10-1996 only shall collect the term fee, teaching fee, special development fees and as per Rule 10(04) shall publish a brochure of particulars of fees to be collected from the student/parents in the school I the notice board of the school compulsorily, and shall submits its one copy to the Block Education Officer and to the Deputy Director. In this regard shall follow the points in the Circular of the Department.

NOTARY
H.R. KARUNAKARA
Area, Bengaluru Dist.
Reg. No. 12327
Expiry Date
30-12-2026
GOVT. OF INDIA

11. Shall follow the Rules of Karnataka Educational Institutions (Regulation of Certain Fees and Donations) Rules-1999 under Notification No. ED 19 Vivida-99 dated 14-03-2000 of the Government compulsorily and as per this rules, no any donation shall be collected. In this regard, shall follow the points in the Circular of the Department issued from time to time in this regard.
12. Within 2 months of obtaining the permission, for obtaining the recognition as per Section 36 to 39 of Karnataka Education Act 1983 (Act 1 of 1995)and as per No. ED 131 Vivida 98 dated 04-11-1999 shall submit the application to the competent authorities and as instructed in the concerned corrigendum order for commencement of the school, shall keep fixed security deposit in the joint account of the recognition renewal authority and the Secretary of the Government council.
13. As per Rule of Annexure-5 of Government Notification No. ED 52 Vivida 99 dated 02-02-2000 in each standard obtained permission shall follow children and teacher ratio.
14. Shall appoint B.Ed. trained teachers to 6th to 8th standard.

NOTARY
H.R. KARUNAKARA
Area, Bengaluru Dist.
Reg. No. 12327
Expiry Date
30-12-2026
GOVT. OF INDIA

15. Shall provide basic amenities to be provided to the school as per Karnataka Education Acts/Rules like furniture, teaching materials, library, playground and school building.
16. The term of the school and working days shall be followed as per the rules of the Department.
17. Within two months of commencement of the school and admission of the students or commencement of the academic year to submit the report to this office. In case if the school is not opened and no any conditions are followed, this order will automatically stands cancelled.
18. If already there is $1^{st}$ to $7^{th}$ standard in the school in English medium , to see that no damage is caused to the Kannada medium classes due to sanction of the English medium higher primary school .
19. As per the Government Circular No. ED 27 SEP 03 dated 13-02-2003 by following the instructions, by making the entries of the service particulars of the Teachers/staff appointed in the school as per rules and to maintain compulsorily.
20. To depute the teacher to the census work without fail.
21. If the documents submitted in the proposal is false, this registration will be cancelled.

NOTARY
H.R. KARUNAKARA
Area, Bengaluru Dist.
Reg. No. 12327
Expiry Date
-12-2026
INDIA

22. In each standard, the number of students should not cross 50 numbers.
23. Up to 5 years of giving the recognition, there is no opportunity for school shifting and transfer.
24. Shall fulfill the conditions contained in the letter of the Government in No. ED 122 SES 2007 dated 17-05-2007.
25. In which medium the registration is given, in the same medium only the school shall be conducted.
26. About the safety of the students in the school, as per the guidelines issued by the Education Department and Home Departments , to take up security steps and to adopt all security equipments required compulsorily and shall be kept in order.
27. As per the Government Order no. ED 369 PGC 2014, dated 11-11-2014 and as instructed in the concerned corrigendum order, shall fulfill the school infrastructure and other conditions compulsorily and in this regard at the time of issue of first recognition, after verification recognition will be given.
28. The jurisdictional Block Education Officer shall keep necessary watch about running of the school as per registration rules.
29. If it is seen violation of any conditions of the registration, the Department reserves the right to withdraw , the registration ex parte.

Date: 15-09-2010.
Place: Bangalore.

Sd/-
Deputy Director,
Public Instruction Department
Bangalore North District.

To: The Secretary hivaganga Educational Trust, Byadarahalli, Magadi Main Road, Vishwaneedam post, Bangalore-9 (By Regd. post).

Copy to: The Director (Primary Education), Office of the Commissioner, Public Instruction Department, Nrupatunga Road, Bangalore for information.

1. Block Education Officer, North one-1, 2nd block, Rajajinagar, Bangalore-10.
2. Office copy.

/Translated by me from Kannada language/

RAGHUNATH D.
TRANSLATOR
No.363, 7th Block, 6th Main, 2nd Stage
Nagarabhavi, Bangalore - 560 072

ATTESTED BY ME

H.R. KARUNAKARA, M.A., LL.B.,
ADVOCATE & NOTARY
9th Main, Shivanagar,
BENGALURU - 560 010

NOTARY
H.R. KARUNAKARA
Area, Bengaluru Dist.
Reg. No. 12327
Expiry Date
30-12-2026
GOVT. OF INDIA